| Form No.4 (Civil) Deposition Sheets (R.P.No.57) |
| --- |

# ವಿಶೇಷ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಯಾದಗಿರಿ

## ಸ್ಪೆಷಲ್.ಸಿ. ಸಂಖ್ಯೆ: 50/2018

ಪ್ರಾ.ಸಾ. 3 ಚಾ.ಸಾ. 6

| | | |
| --- | --- | --- |
| ಹೆಸರು | : | ಆನಂದ |
| ತಂದೆಯ ಹೆಸರು | : | ಸೋಮಣ್ಣ |
| ವಯಸ್ಸು | : | 39 ವರ್ಷ |
| ಉದ್ಯೋಗ | : | ದ್ವಿತೀಯ ದರ್ಜೆ ಸಹಾಯಕ |
| ವಾಸ | : | ಶ್ರೀರಂಗಪಟ್ಟಣ |

**ವಿಸಿ ಮುಖಾಂತರ ಪ್ರಮಾಣ ವಚನ ಭೋಧಿಸಿದ ದಿನಾಂಕಃ 26-02-2026**
**ಮುಖ್ಯ ವಿಚಾರಣೆ ವಿಶೇಷ ಸರಕಾರಿ ಅಭಿಯೋಜಕರಿಂದ**

2013 ರಿಂದ 2016 ರ ವರೆಗೆ ನಾನು ದ್ವಿತೀಯ ದರ್ಜೆ ಸಹಾಯಕನೆಂದು ಬಿ.ಇ.ಓ ಕವೇರಿ ಯಾದಗಿರಿಯಲ್ಲಿ ಕರ್ತವ್ಯ ನಿರ್ವಹಿಸಿರುತ್ತೇನೆ. ಚಾಸಾ 5 ಮತ್ತು 7 ರವರ ಪರಿಚಯ ಇದೆ. ಈ ಪ್ರಕರಣದ ಆರೋಪಿಯಾದ ಭೀಮರಾಯ ರವರ ಪರಿಚಯ ಇದೆ.

2. ದಿಃ 25-08-2014 ರಂದು ಸಂಜೆ 5-00 ಗಂಟೆಗೆ ಯಾದಗಿರಿ ಲೋಕಾಯಕ್ತ ಠಾಣೆಯಿಂದ ಸಿಬ್ಬಂದಿಗಳು ನಮ್ಮ ಕಛೇರಿಗೆ ಬಂದಿದ್ದು, ನನ್ನನ್ನು ಚಾಸಾ 7 ರವರನ್ನು ಪ್ರಕರದಮೊಂದರಲ್ಲಿ ಪಂಚನಾಮೆಗೆ ಕಳುಹಿಸಿಕೊಡುವಂತೆ ಕೇಳಿರುತ್ತಾರೆ. ಕೂಡಲೇ ನಾವು ಲೋಕಾಯಕ್ತ ಪೋಲಸ ಠಾಣೆಗೆ ಹೋಗಿದ್ದು ಅವರು ನಮ್ಮನ್ನು ಪರಿಚಯ ಮಾಡಿಕೊಂಡು ಸಂಜೆ ಗುಲ್ಬರ್ಗಾಕ್ಕೆ ಹೋಗುವುದಿದೆ ಎಂದು ತಿಳಿಸಿ ಅದರಂತೆ ನಾವು ಮತ್ತೆ ಸಂಜೆ 7-00 ಗಂಟೆಗೆ ಬಿಟ್ಟು ಗುಲ್ಬರ್ಗಾದ ಪ್ರವಾಸಿ ಮಂದಿರಕ್ಕೆ ರಾತ್ರಿ 9-30 ಕ್ಕೆ ತಲುಪಿದೆವು. ನಂತರ ಮರನೇ ದಿನ 5-30 ಕ್ಕೆ ಹೋಗಬೇಕಾಗಿದೆ ಎಂದು ಡಿ.ಎಸ್.ಪಿ ರವರು ನಮಗೆ ತಿಳಿಸಿ ಆ ಸಮಯಕ್ಕೆ ತಯಾರಿರುವಂತೆ ನಮಗೆ ಹೇಳಿದರು.

3. ಮರನೇ ದಿನ ಬೆಳಿಗ್ಗೆ 5-40 ಕ್ಕೆ ಸರಕಾರಿ ಜೀಪ್ ಕೆಎ-014765 ರಲ್ಲಿ ಹೊರಟು ಪೋರ್ಟನೂರ ಬಡಾವಣೆಯ ಒಜಾ ಲೇಔಟಗೆ ಬೆಳಿಗ್ಗೆ 6-10 ಕ್ಕೆ ತಲುಪಿದೆವು. ಅಲ್ಲಿ ಮನೆ ಸಂ.

1/891 ಕ್ಕೆ ಹೋಗಿ ಬೆಲ್ ಮಾಡಿದಾಗ ಒಬ್ಬ ಮಹಿಳೆ ಮನೆಯ ಬಾಗಿಲು ತೆಗೆದಿದ್ದು ಅವರಿಗೆ ಶೋಧನ ವಾರೆಂಟ್ ತೋರಿಸಿ ಮನೆ ಶೋಧನೆ ಮಾಡಲು ಅನುಮತಿಸುವಂತೆ ಕೋರಿರುತ್ತೇವೆ. ನಾವು ವೈಯಕ್ತಿಕ ಅಂಗ ಶೋಧನೆ ಮಾಡಿಕೊಂಡು ಯಾವುದೇ ಬೆಲೆ ಬಾಳುವ ವಸ್ತು ನಮ್ಮ ಬಳಿ ಇಲ್ಲದಿರುವುದನ್ನು ಖಾತ್ರಿ ಪಡಿಸಿರುತ್ತೇವೆ. ಸದರಿ ಮನೆಗೆ ಭಾಗ್ಯವಂತಿ ನಿಲಯ ಎಂದು ಹೇಸರಿಡಲಾಗಿತ್ತು.

4. ನಾವು ಕಂಪೌಡ ಒಳಗೆ ಪರೀಶಿಲಿಸಿದಾಗ ಒಂದು ಹೊಂಡಾ ಆಕ್ಟೀವ್ ಕೆಎ-32-ಎಕ್ಸ-0418 ಇನ್ನೊಂದು ಹಿರೋ ಹೊಂಡಾ ಸುಪುರ್ ಸ್ಲೇಂಡರ್ ಕೆಎ-32-ಎಸ್-8394 ಇತ್ತು. ವಿಧ್ಯುತ್ ಮೀಟರ ಸಂಖ್ಯೆ ನೋಡಲಾಗಿ ಅವು 1230329 ಮತ್ತು 121008 ಇದ್ದವು. ಒಂದು ನೀರಿನ ಟ್ಯಾಪ ಸಂ. 40164 ಸಹ ಇತ್ತು.

5. ನಂತರ ನಾವು ಮನೆಯ ಒಳಗೆ ಪ್ರವೇಶಿಸಿ ನೋಡಿದಾಗ ಒಂದು ಹಾಲ್, ಎರಡು ಮಲಗುವ ಕೋಣೆ, ಒಂದು ದೇವರ ಮನೆ, ಒಂದು ಅಡುಗೆ ಮನೆ, ಒಂದು ಹೊರಂಗಾಣ ಇದ್ದವು. ಅದೇ ಮನೆಯ ಹಿಂಭಾಗದಲ್ಲಿ 60★40 ಅಳತೆಯ ಒಂದು ನಿವೇಶನ ಮನೆಗೆ ಹೊಂದಿಕೊಂಡಂತೆ ಇತ್ತು. ಮನೆಯ ಒಳಭಾಗದಲ್ಲಿ ಇಡಲಾಗಿದ್ದ ಮತ್ತು ಅಳವಡಿಸಲಾಗಿದ್ದ ಎಲ್ಲಾ ಪೀಠೋಪಕರಣಗಳು ವಿಧ್ಯುತ್ ಸಲಕರಣೆಗಳು ಮತ್ತು ಎಲ್ಲಾ ವಸ್ತುಗಳನ್ನು ಪರೀಶಿಸಿರುತ್ತೇವೆ. ಸದರಿ ಮನೆಯಲ್ಲಿ ನಮಗೆ ರೂ. 19,20,980/- ನಗದು ದೂರಕಿರುತ್ತದೆ. ಚಿನ್ನದ ಅಭರಣಗಳು 309.500 ಗ್ರಾಂ ನಷ್ಟು ತೂಕದ್ದು ಇತ್ತು. ಸ್ಥಳಕ್ಕೆ ಚಾಸಾ 12 ಸಂಜೀವ್ ಅಕ್ಕಸಾಲಿಗ ಬಂದಿದ್ದು ಸದರಿ ಅಭರಣಗಳನ್ನು ತೂಕ ಮಾಡಿ ಅಂದಾಜು ಮೌಲ್ಯ ಮಾಪನ ಮಾಡಿದ್ದು, ಅದು ಒಟ್ಟು ರೂ. 6,95,400/- ಇತ್ತು. ಬೆಳ್ಳಿಯ ವಸ್ತುಗಳು 2 ಕೆಜಿ 824 ಗ್ರಾಂ ನಷ್ಟು ತೂಕದ್ದು ಇತ್ತು. ಸ್ಥಳಕ್ಕೆ ಚಾಸಾ 12 ಸಂಜೀವ್ ಅಕ್ಕಸಾಲಿಗ ಬಂದಿದ್ದು ಸದರಿ ಅಭರಣಗಳನ್ನು ತೂಕ ಮಾಡಿ ಅಂದಾಜು ಮೌಲ್ಯ ಮಾಪನ ಮಾಡಿದ್ದು, ಅದು ಒಟ್ಟು ರೂ. 80,000/- ಇತ್ತು. ನಂತರ ಸದರಿ ಕಟ್ಟಡ ಲಕ್ಷಾಂತರ ರೂಪಾಯಿ ಮೌಲ್ಯದು ಇತ್ತು.

6. ಈ ಎಲ್ಲಾ ಪ್ರಕ್ರಿಯೆ ಪೂರ್ಣಗೊಳ್ಳಲು ಮಧ್ಯಾಹ್ನ 3-00 ಗಂಟೆ ಆಗಿರುತ್ತದೆ. ಈ ಎಲ್ಲಾ ವಸ್ತುಗಳನ್ನು ಜಪ್ತಿಪಡಿಸಿಕೂಳ್ಳಲಾಯಿತು. ನಂತರ ವರದಿ ಮತ್ತು ಜಪ್ತಿಪಡಿಸಿಕೊಂಡ ಎಲ್ಲಾ ವಸ್ತುಗಳ ಮೇಲೆ ನನ್ನ ಚಾಸಾ 5, 7 ಹಾಗೂ ಚಾಸಾ 12 ರವರ ಸಹಿ ಪಡೆದಿರುತ್ತಾರೆ. ನಂತರ ನಮ್ಮನ್ನು ನಾವು ಹಿಂದಿರುಗಿರುತ್ತೇವೆ. ಸಾಕ್ಷಿಗೆ ಕಡತದಲ್ಲಿನ ಮನೆ ಶೋಧನ ಪಂಚನಾಮೆ ತೋರಿಸಲಾಗಿ ಅದರಲ್ಲಿರುವ ಸಹಿಯನ ನೋಡಿ ಗುರುತಿಸಿದ್ದು ಅದನ್ನು ನಿ.ಪಿ.104 ಎಂದು ಸಾಕ್ಷಿಯ ಸಹಿಯನ್ನು ನಿ.ಪಿ. 104(ಎ) ಎಂದು ಗುರುತಿಸಲಾಯಿತು. ಸಾಕ್ಷಿಗೆ ನಿಪಿ 8 ರಿಂದ 39

ರ ವರೆರಿನ ಭಾವಚಿತ್ರಗಳನ್ನು ತೋರಿಸಿದ್ದು ಅವುಗಳನ್ನು ನೋಡಿ ಜಪ್ತಿಪಡಿಸಿಕೊಂಡ ವಸ್ತುಗಳನ್ನು ಗುರುತಿಸುತ್ತಾರೆ. ಸಾಕ್ಷಿಗೆ ನಿಪಿ **4** ನ್ನು ತೋರಿಸಿ ತಮ್ಮ ಸಹಿಂನ್ನು ಗುರುತಿಸಿದು ಅದನ್ನು ನಿಪಿ **4**(ಎ) ಗುರುತಿಸುತ್ತಾರೆ.

<u>ಪಾಟೀ ಸವಾಲು ಆರೋಪಿತರ ಪರವಾಗಿ ಶ್ರೀ. ಎ.ಎ.ಯು. ವಕೀಲರಿಂದ</u>

**7.** ಪಂಚನಾಮೆಯಲ್ಲಿ ನಮೂದಿಸಿದ ವಸ್ತುಗಳ ಮೌಲ್ಯ ಅಂದಾಜುನದ್ದು ಇರುತ್ತದೆ ಎಂದರೆ ಸರಿ. ಚಿನ್ನ ಮತ್ತು ಬೆಳ್ಳಿ ವಸ್ತುಗಳ ಮೌಲ್ಯ ದಾಳಿ ಮಾಡಿದ ದಿನದ ಮಾರುಕಟ್ಟೆ ಮೌಲ್ಯ ಅಧರಿಸಿದೆ ಎಂದರೆ ಸರಿ. ನಾವು ದಾಳಿ ಮಾಡಿದ ಕಟ್ಟದ ಮೌಲ್ಯ ಮಾಪನ ಮಾಡಲು ನಾನು ತಾಂತ್ರಿಕ ಜ್ಞಾನ ಹೊಂದಿಲ್ಲ ಎಂದರೆ ಸರಿ.

<u>ಮರು ವಿಚಾರಣೆಃ-ಇಲ್ಲ</u>

(ನನ್ನ ಉಕ್ತ ಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ)

ಓ.ಹೇ.ಕೆ.ಸ. ಇದೆ.

ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಯಾದಗಿರಿ.

Form No.4 (Civil) Deposition Sheets (R.P.No.57)

# ವಿಶೇಷ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಯಾದಗಿರಿ

## ಸ್ಪೆಷಲ್.ಸಿ. ಸಂಖ್ಯೆ 50/2018

ಫ್ರಾ.ಸಾ. 4 ಚಾ.ಸಾ. 57

| | | |
|---|---|---|
| ಹೆಸರು | : | ಕಾಂತರಾಜು |
| ತಂದೆಯ ಹೆಸರು | : | ಎನ್ ನರಸಿಂಹಯ್ಯ |
| ವಯಸ್ಸು | : | 67 ವರ್ಷ |
| ಉದ್ಯೋಗ | : | ನಿವೃತ ಉಪ ನಿರ್ದೇಶಕರು ಲೋಕಾಯುಕ್ತ |
| ವಾಸ | : | ತೂಮಕೂರು |

ವಿಸಿ ಮುಖಾಂತರ ಪ್ರಮಾಣ ವಚನ ಭೋಧಿಸಿದ ದಿನಾಂಕಃ 26-02-2026
ಮುಖ್ಯ ವಿಚಾರಣೆ ವಿಶೇಷ ಸರಕಾರಿ ಅಭಿಯೋಜಕರಿಂದ

ನಾನು 2015 ರಿದದಿ 2019 ರ ವರೆಗೆ ಸಾಂಖ್ಯಿಕ ವಿಭಾಗ ಲೋಕಾಯಕ್ತ ಬೆಂಗಳೂರಿನಲ್ಲಿ ಕರ್ತವ್ಯ ನಿರ್ವಹಿಸಿರುತ್ತೇನೆ.

2. ದಿನಾಂಕ 26-07-2016 ರ ಪತ್ರದಲ್ಲಿ ಆರೋಪಿ ಭೀಮರಾಯ ಕವಲ್ದಾರ ಮತ್ತು ಅವರ ಕುಟುಂಬದವರ ಆಹಾರ ಮತ್ತು ಆಹಾರೇತರ ವೆಚ್ಚಗಳ ಕೌಟುಂಬಿಕ ವೆಚ್ಚದ ವರದಿಯನ್ನು ತಯಾರಿಸಿಕೊಡಲು ಐ,ಜಿ.ಪಿ. ಲೋಕಾಯಕ್ತ ರವರ ಮೂಲಕ ಜಿಲ್ಲಾ ಅಧೀಕ್ಷಕರು ಯದಗಿರಿ ಲೋಕಾಯಕ್ತ ರವರು ಕೋರಿದ್ದು, ನಾನು ಸಾಮಾನ್ಯ ಕುಟುಂಬ ಆದಾಯ ಮತ್ತು ವೆಚ್ಚ ಸಮೀಕ್ಷೆ 2009 ಆಧರಿಸಿ ಆಯಾ ವರ್ಷಗಳ ಬೆಳೆ ಸೂಚ್ಯಂಕ ಆಧರಿಸಿದ್ದು ಪ್ರಕಾರ ದಿನಾಂಕ 02-07-1995 ರಿಂದ 26-08-2014 ರ ವರೆಗೆ ಲೆಕ್ಕಚಾರ ಮಾಡಲಾಗಿ ಒಟ್ಟು ಅಂದಾಜು ವೆಚ್ಚ ರೂ. 15,53,965/- ಎಂದು ಎಸ್,ಪಿ. ಲೋಕಾಯಕ್ತ ಯಾದಗಿರಿ ರವರಿಗೆ ವರದಿ ಕಳುಹಿಸಿಕೊಡಲಾಗಿದೆ. ಸಾಕ್ಷಿಗೆ ಕಡತದಲ್ಲಿನ ಮುಖ ಪತ್ರ ಮತ್ತು ವರದಿಯನ್ನು ಒಟ್ಟಾಗಿ ತೋರಿಸಲಾಗಿ ಅದರಲ್ಲಿರುವ ಸಹಿ ನೋಡಿ ಗುರುತಿಸಿದ್ದು ಅದನ್ನು ನಿ.ಪಿ. 105 ಎಂದು ಸಾಕ್ಷಿಯ ಸಹಿಗಳನ್ನು ನಿ.ಪಿ.105 (ಎ) ರಿಂದ (ಎಫ್) ಎಂದು ಗುರುತಿಸಲಾಯಿತು.

ಪಾಟೀ ಸವಾಲು ಆರೋಪಿತರ ಪರವಾಗಿ ಶ್ರೀ. ಎ.ಎ.ಯು. ವಕೀಲರಿಂದ

3. ನಾನು ಪರಿಗಣಿಸಿರುವ 19 ಗೃಹಪ್ರೋಯೋಗಿ ಆಹಾರ ಪದಾರ್ಥಗಳು ಕೃಷಿ ಮತ್ತು ಕೃಷಿಯೇತರ ಕುಟುಂಬಕ್ಕೆ ವ್ಯತ್ಯಾಸದಿಂದ ಕೂಡಿರುತ್ತದೆ ಎಂದರೆ ಸರಿ. ನನಗೆ ಈ ಪ್ರಕರಣದಲ್ಲಿ

ವೆಚ್ಚ ನಿರ್ದರಣೆ ಮಾಡುವ ಸಲುವಾಗಿ ಆರೋಪಿತರ ಕುಟುಂಬ ಕೃಷಿ ಕುಟುಂಬವೇ ಅಥವಾ ಕೃಷಿಯೇತರ ಕುಟುಂಬವೇ ಎಂದು ಲೋಕಾಯುಕ್ತ ಪೋಲಿಸರು ಮಾಹಿತಿ ನೀಡಿಲ್ಲ. ಮಾಂಸಹಾರಿ ಮತ್ತು ಸಸ್ಯಹಾರಿ ಕುಟುಂಬಳ ನಡುವೆ ಗೃಹಪಯೋಗಿ ಆಹಾರ ಪದಾರ್ಥಗಳ ವೆಚ್ಚದಲ್ಲಿ ವ್ಯತ್ಯಾಸ ಇರುತ್ತದೆ ಎಂದರೆ ಸರಿ. ಆರೋಪಿತರು ಸ್ವಂತ ಮನೆಯಲ್ಲಿ ಅಥವಾ ಬಾಡಿಗೆ ಮನೆಯಲ್ಲಿ ವಾಸವಿರುತ್ತಾರೆೆೋ ಎಂಬ ಬಗ್ಗೆ ಮಾಹಿತಿ ನೀಡಿಲ್ಲ ಅವರು ಒಟ್ಟು 6 ಜನ ವಾಸವಿರುತ್ತಾರೆ ಎಂದು ಮಾತ್ರ ಮಾಹಿತಿ ನೀಡಿರುತ್ತಾರೆ. ಯಾವುದೇ ಹಿರಿಯ ವಯಸ್ಸಿ ನ ಕುಟುಂಬದ ಸದಸ್ಯನ ವಯೋ ಸಂಬಂಧಿ ಕಾಯಿಲೆ ಬಗ್ಗೆ ನನಗೆ ಮಾಹಿತಿ ನೀಡಿಲ್ಲ. ಕೃಷಿ, ಕೃಷಿಯೇತರ, ಸಸ್ಯಹಾರಿ, ಮಾಂಸಹಾರಿ ಕುಟುಂಬಗಳ ಆಹಾರ ಪದಾರ್ಥಗಳ ಬಳಕೆಯ ವೆಚ್ಚ ಶೇ. 25 ರಿಂದ 30 ರಷ್ಟು ವ್ಯತ್ಯಾಸ ಇರುತ್ತದೆ ಎಂದರೆ ಸರಿ.

<u>ಮರು ವಿಚಾರಣೆಃ-ಇಲ್ಲ</u>

(ನನ್ನ ಉಕ್ತ ಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ)

ಓ.ಹೇ.ಕೆ.ಸ. ಇದೆ.

ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಯಾದಗಿರಿ.

| Form No.4 (Civil) Deposition Sheets (R.P.No.57) |
|---|

# ವಿಶೇಷ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಯಾದಗಿರಿ

## ಸ್ಪೆಷಲ್.ಸಿ. ಸಂಖ್ಯೆ 50/2018

ಫ್ರಾ.ಸಾ. 5 ಚಾ.ಸಾ. 40

| | | |
|---|---|---|
| ಹೆಸರು | : | ಮಂಜುನಾಥ |
| ತಂದೆಯ ಹೆಸರು | : | ಪಂಪಣ್ಣರೆಡ್ಡಿ |
| ವಯಸ್ಸು | : | 68 ವರ್ಷ |
| ಉದ್ಯೋಗ | : | ನಿವೃತ ಸಹಾಯಕ ಕೃಷಿ ನಿರ್ದೇಶಕರು |
| ವಾಸ | : | ಬೆಂಗಳೂರು |

**ವಿಸಿ ಮುಖಾಂತರ ಪ್ರಮಾಣ ವಚನ ಭೋಧಿಸಿದ ದಿನಾಂಕಃ 26-02-2026**
**ಮುಖ್ಯ ವಿಚಾರಣೆ ವಿಶೇಷ ಸರಕಾರಿ ಅಭಿಯೋಜಕರಿಂದ**

ನಾನು ದಿನಾಂಕ 01-12-2016 ರಿಂದ 1 ತಿಂಗಳವರೆಗೆ ನಾನು ಸಹಾಯಕ ಕೃಷಿ ನಿರ್ದೇಶಕ ಆಗಿ ಕೃಷಿ ಇಲಾಖೆ ಶಹಾಪುರದಲ್ಲಿ ಕರ್ತವ್ಯ ನಿರ್ವಹಿಸಿರುತ್ತೇನೆ.

2. ದಿನಾಂಕ 15-11-2016 ರಂದು ಡಿ.ಎಸ್.ಪಿ ಲೋಕಾಯುಕ್ತ ಯಾದಗಿರಿ ರವರ ಪತ್ರ ಬರೆದು ಆರೋಪಿ ಭೀಮರಾಯ ಕವಲ್ದಾರ ರವರು ಆದಾಯಕ್ಕಿಂತ ಹೆಚ್ಚಿನ ಅಸಮಾತೋಲನ ಆಸ್ತಿ ಹೊಂದಿದ್ದ ಬಗ್ಗೆ ಪ್ರಕರಣ ದಾಖಲಾಗಿದ್ದು ಸದರಿಯವರ ಮತ್ತು ಅವರ ಕುಟುಂಬದವರು ಜಮೀನುಗಳಲ್ಲಿ ಬೆಳೆಗಳಿಂದ ಬಂದ ಕೃಷಿ ಆದಾಯ ಕೋರಿದ್ದು ಜಮೀನುಗಳ ಸರ್ವೆ ನಂಬರಗಳಲ್ಲಿ ಬೆಳೆದ ಬೆಳೆಗಳ ವಿವರವನ್ನು 1985-1986 ರಿಂದ 1996-1997 ರ ವರೆಗಿನ ಕಂದಾಯ ಇಲಾಖೆ ಪಹಾಣಿಯಿಂದ ಮತ್ತು 1997-1998 ರಿಂದ 2013-2014 ರ ವರೆಗೆ ಸಹಾಯಕ ಕಾರ್ಯ ನಿರ್ವಾಹಕ ಅಭಿಯಂತರರು ಕೆ.ಬಿ.ಜೆ.ಎನ್.ಎಲ್ ಶಹಾಪುರ, ಉಪ-ವಿಭಾಗ-1 ವಡಗೇರಾರವರಿದಿಂದ ಪಡೆದು ಬೆಳೆಗಳ ಇಳುವರಿಯನ್ನು ಸುಧಾರಿತ ಬೇಸಾಯ ಕ್ರಮಗಳ ದಾರವಾಡ ಮತ್ತು ರಾಯಚೂರು ವಿಶ್ವವಿದ್ಯಾಲಯಗಳ 2014 ರ ಕೈಪೀಡಿ ಪರಿಗಣಿಸಿ ಸಾಧಾರಣ ಇಳುವರಿಯನ್ನು ಗಣನೆಗೆ ತೆಗೆದುಕೊಂಡಿರುತ್ತೆನೆ. ಸದರಿ ಸರ್ವೆ ನಂಬರ ಜಮೀನುಗಳಲ್ಲಿ ಬೆಳೆದ ಕಾರ್ಯದರ್ಶಿ ಎ.ಎಂ.ಸಿ ಶಹಾಪುರ, ಯಾದಗಿರಿ ಮತ್ತು ರಾಯಚೂರು ಮತ್ತು ಕಲಬುರಗಿ ರವರು ನೀಡಿದ ಮಾದರಿ ದರವನ್ನು ಗಣನೆಗೆ

ತೆಗೆದುಕೊಂಡಿರುತ್ತೆನೆ. ಅವುಗಳನ್ನು ಆಧರಿಸಿ ಲೋಕಾಯಕ್ತ ಪೋಲಿಸರಿಗೆ ದಿನಾಂಕ 30-11-2016 ರಂದು ಆದಾಯ ವಿವರ ಸಲ್ಲಿಸಿರುತ್ತೇನೆ. ಸಾಕ್ಷಿಗೆ ಕಡತದಲ್ಲಿನ ಕೃಷಿ ಆದಾಯದ ವರದಿ ಪಂಚನಾಮೆ ತೋರಿಸಲಾಗಿ ಅದರಲ್ಲಿರುವ ಸಹಿ ನೋಡಿ ಗುರುತಿಸಿದ್ದು ಅದನ್ನು ನಿ.ಪಿ.106 ಎಂದು ಸಾಕ್ಷಿಯ ಸಹಿಯನ್ನು ನಿ.ಪಿ.106(ಎ) ರಿಂದ (ಜಿ) ಎಂದು ಗುರುತಿಸಲಾಯಿತು. ಈ ಬಗ್ಗೆ ನಾನು ಪೋಲಿಸರ ಮುಂದೆ ಹೇಳಿಕೆ ನೀಡಿರುತ್ತೇನೆ.

<u>ಪಾಟೀ ಸವಾಲು ಆರೋಪಿತರ ಪರವಾಗಿ ಶ್ರೀ. ಎ.ಎ.ಯು. ವಕೀಲರಿಂದ</u>

3. ಕೃಷಿ ಆದಾಯದ ಬೆಳೆ ಸಮೀಕ್ಷ ವರದಿಗಳು ಅಂದಾಜು ದರದಲ್ಲಿ ಇದ್ದು ಕೃಷಿ ಇಳುವರಿ ಹವಮಾನ, ನೀರಾವರಿ ಮತ್ತು ಮಣ್ಣಿನ ಫಲವತ್ತತೆ ಆಧರಿಸಿರುತ್ತದೆ ಎಂದರೆ ಸರಿ. ನಾನು ಆರೋಪಿತರ ಜಮೀನನ್ನು ನೇರವಾಗಿ ಬೇಟಿ ನೀಡಿ ಪರಿಶೀಲಿಸಿಲ್ಲ. ದಾಖಲೆಗಳನ್ನು ಆಧರಿಸಿ ವರದಿ ನೀಡಿರುತ್ತೆನೆ. ಸದರಿ ಜಮೀನುಗಳು ನೀರಾವರಿ ಹೊಂದಿದ್ದ ಬಗ್ಗೆ ಯಾವುದೇ ದಾಖಲೆಗಳನ್ನು ನನಗೆ ಒದಗಿಸಿಲ್ಲ. ಎ.ಪಿ.ಎಂ.ಸಿ ಬೆಳೆಯ ದರಗಳು ಮಾರುಕಟ್ಟೆ ದರಗಳಿಗೆ ವ್ಯತ್ಯಾಸ ಇರುತ್ತದೆ ಎಂದರೆ ಸರಿ. ನಾನು ಈ ಪ್ರಕರಣದಲ್ಲಿ ಒದಗಿಸಿರುವ ಸರ್ವೆ ನಂ. 326 ರ ಬೆಳೆಯ ವಿವರದಲ್ಲಿ 1985-1986 ರಿಂದ 2002-2003 ರ ವರೆಗೆ ಮುಂಗಾರು ಬೆಳೆ ಮಾತ್ರ ಪರಿಗಣಸಿರುತ್ತೇನೆ ಎಂದರೆ ಸರಿ. ಲೋಕಾಯಕ್ತ ಪೋಲಿಸರು ಒದಗಿಸಿದ ಎ.ಪಿ.ಎಂ.ಸಿ ಮಾರುಕಟ್ಟೆ ದರದಲ್ಲಿ ಕನಿಷ್ಟ, ಗರಿಷ್ಟ ಮತ್ತು ಸಾಧಾರಣಾ ಬೆಲೆ ಇದೆ ಎಂದರೆ ಸರಿ. ಅವುಗಳಲ್ಲಿ ಪ್ರತಿ ವರ್ಷ ವ್ಯತ್ಯಾಸ ಆಗುತ್ತದೆ ಎಂದರೆ ಸರಿ. ನಾನು ನೀಡಿರುವ ವರದಿಯಲ್ಲಿ ಯಾವುದನ್ನು ಪರಿಗಣಿಸಿ ಮೌಲ್ಯ ಮಾಪನ ಮಾಡಿರುತ್ತೇನೆ ಎಂದು ನಮೂದಿಸಿಲ್ಲ ಎಂದರೆ ಸರಿ. ನಾನು ಸರ್ವೆವಾರು ನೀಡಿರುವ ಮೌಲ್ಯ ಸಾಧಾರಣಾ ಬೆಲೆ ಪರಿಗಣಿಸಿದರೂ ದುಪ್ಪಟ್ಟು ಆಗುತ್ತದೆ ಎಂದರೆ ಗೊತ್ತಿಲ್ಲ. ನಾನು ಲೋಕಾಯಕ್ತ ಪೋಲಿಸರ ಕೋರಿಕೆಯಂತೆ ಮಾತ್ರ ಸರ್ವೆವಾರು ಈ ಪ್ರಕರಣದಲ್ಲಿ ವರದಿ ನೀಡಿರುತ್ತೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ-ಇಲ್ಲ</u>

(ನನ್ನ ಉಕ್ತ ಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ)

ಓ.ಹೇ.ಕೆ.ಸ. ಇದೆ.

ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಯಾದಗಿರಿ.

| Form No.4 (Civil) Deposition Sheets (R.P.No.57) |
|---|

# ವಿಶೇಷ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಯಾದಗಿರಿ

## ಸ್ಪೆಷಲ್.ಸಿ. ಸಂಖ್ಯೆ 50/2018

ಪ್ರಾ.ಸಾ. 6 ಚಾ.ಸಾ. 8

| | | |
|---|---|---|
| ಹೆಸರು | : | ಲಕ್ಷ್ಮಣ |
| ತಂದೆಯ ಹೆಸರು | : | ತಿಪ್ಪಣ್ಣ |
| ವಯಸ್ಸು | : | 61 ವರ್ಷ |
| ಉದ್ಯೋಗ | : | ನಿವೃತ ಪ್ರಥಮ ದರ್ಜೆ ಸಹಾಯಕ |
| ವಾಸ | : | ಯಾದಗಿರಿ |

ಪ್ರಮಾಣ ವಚನ ಭೋಧಿಸಿದ ದಿನಾಂಕಃ 25-02-2026
ಮುಖ್ಯ ವಿಚಾರಣೆ ವಿಶೇಷ ಸರಕಾರಿ ಅಭಿಯೋಜಕರಿಂದ

ನಾನು 2014 ರಿಂದ 2025 ರ ವರೆಗೆ ನಾನು ಪ್ರಥಮ ದರ್ಜೆ ಸಹಾಯಕನೆಂದು ಬಿ.ಇ.ಒ ಕವೇರಿ ಯಾದಗಿರಿಯಲ್ಲಿ ಕರ್ತವ್ಯ ನಿರ್ವಹಿಸಿರುತ್ತೆನೆ. ಚಾಸಾ 9 ರವರ ಪರಿಚಯ ಇದೆ ಅವರು ಮೃತಪಟ್ಟಿರುತ್ತಾರೆ. ಈ ಪ್ರಕರಣದ ಆರೋಪಿಯಾದ ಭೀಮರಾಯ ರವರ ಪರಿಚಯ ಇದೆ.

2. ದಿಃ 25-08-2014 ರಂದು ಬೆಳಿಗ್ಗೆ 5-00 ಗಂಟೆಗೆ ಯಾದಗಿರಿ ಲೋಕಾಯಕ್ತ ಠಾಣೆಯಿಂದ ಸಿಬ್ಬಂದಿಗಳು ನಮ್ಮ ಕಛೇರಿಗೆ ಬಂದಿದ್ದು, ನನ್ನನ್ನು ಪ್ರಕರಣದಮೊಂದರಲ್ಲಿ ಆರೋಪಿತರ ಮನೆಯ ಪರೀಶಿಲನೆಗೆ ಬರುವಂತೆ ಹೇಳಿರುತ್ತಾರೆ. ಅದೇ ದಿನ ಸಂಜೆ ನಾನು ಲೋಕಾಯಕ್ತ ಪೋಲಸ ಠಾಣೆಗೆ ಹೋಗಿದ್ದು ಅವರು ನಮ್ಮನ್ನು ಪರಿಚಯ ಮಾಡಿಕೊಂಡು ಮರನೇ ದಿನ ಬೆಳಿಗ್ಗೆ 5-00 ಗಂಟೆಗೆ ಲೋಕಾಯಕ್ತ ಕಛೇರಿಗೆ ಬರುವಂತೆ ಸೂಚಿಸಿ ಕಳುಹಿಸಿರುತ್ತಾರೆ. ಅದರಂತೆ ನಾನು ಬೆಳಿಗ್ಗೆ 5-00 ಗಂಟಗೆ ಲೋಕಾಯಕ್ತ ಕಛೇರಿಗೆ ಹೋದೆ. ಅಲ್ಲಿ ಲೋಕಾಯಕ್ತ ಸಿಬ್ಬಂದಿಯವರು ನನ್ನನ್ನು ಶಹಾಪುರದ ತಹಶೀಲ್ದಾರ ಕಛೇರಿ ಪಕ್ಕದ ಸರಕಾರಿ ವಸತಿ ಗೃಹಕ್ಕೆ ಕರೆದುಕೊಂಡು ಬೆಳಿಗ್ಗೆ 6-15 ಕ್ಕೆ ಸರಕಾರಿ ಜೀಪಿನಲ್ಲಿ ಹೋದರು.

3. ನಂತರ ಸದರಿ ಮನೆಯ ಬೆಲ್ ಮಾಡಿದಾಗ ಆರೋಪಿ ಭೀಮರಾಯ ರವರು ಮನೆಯ ಬಾಗಿಲು ತೆಗೆದಿದ್ದು ಅವರಿಗೆ ಶೋಧನ ವಾರೆಂಟ್ ತೋರಿಸಿ ಮನೆ ಶೋಧನೆ ಮಾಡಲು ಅನುಮತಿಸುವಂತೆ ಕೋರಿರುತ್ತೇವೆ. ಅದಕ್ಕೆ ಅವರು ಅದಕ್ಕೆ ಸಹಿ ಮಾಡಿರುತ್ತಾರೆ.

5. ನಂತರ ನಾವು ಮನೆಯ ಒಳಗೆ ಪ್ರವೇಶಿಸಿ ನೋಡಿದಾಗ ಒಂದು ಟೇಬಲ್, ನಾಲ್ಕು ಚೇರ್. ಗಾರ್ಡೆಜ್ ಅಲಮರ್, ಸ್ಯಾಮಸಂಗ ಮೋಬೈಲ್, ಒಂದು ವಾಚ್, 5 ಗ್ರಾಂ ಬಂಗಾರ, 24 ಗ್ರಾಂ ಬಂಗಾರದ ಲಾಕೇಟ, ಒಂದು ಎ.ಟಿ.ಎಂ ಕಾರ್ಡ, ರೂ. 50,940/- ನಗದು ಹಣ ಇದ್ದು ಅವುಗಳನ್ನು ಪರಿಶೀಲಿಸಿರುತ್ತೆವೆ.

6. ಈ ಎಲ್ಲಾ ಪ್ರಕ್ರಿಯೆ ಬೆಳಿಗ್ಗೆ 7-30 ರಿಂದ 9-00 ಗಂಟೆ ಆಗಿರುತ್ತದೆ. ಈ ಎಲ್ಲಾ ವಸ್ತುಗಳ ಅಂದಾಜು ಮೌಲ್ಯ ರೂ. 42,000/- ಇತ್ತು. ಬಂಗಾರದ ಮೌಲ್ಯಮಾಪನವನ್ನು ಚಾಸಾ 13 ಸುರೇಶ ಮಾಡಿರುತ್ತಾರೆ. ನಂತರ ಪಂಚನಾಮೆ ತಯಾರಿಸಿ ನಮ್ಮ ಸಹಿ ಪಡೆದಿರುತ್ತಾರೆ. ಸಾಕ್ಷಿಗೆ ಕಡತದಲ್ಲಿನ ನಿಪಿ 6 ಮನೆ ಪರೀಶಿಲನಾ ಪಂಚನಾಮೆ ತೋರಿಸಲಾಗಿ ಅದರಲ್ಲಿರುವ ಸಹಿಯನ ನೋಡಿ ಗುರುತಿಸಿದ್ದು ಅದನ್ನು ನಿ.ಪಿ.6 (ಬಿ) ಎಂದು ಗುರುತಿಸಲಾಯಿತು. ಸಾಕ್ಷಿಗೆ ನಿಪಿ 8 ರಿಂದ 39 ರ ವರೆರಿನ ಭಾವಚಿತ್ರಗಳನ್ನು ತೋರಿಸಿದ್ದು ಅವುಗಳನ್ನು ನೋಡಿ ಜಪ್ತಿಪಡಿಸಿಕೊಂಡ ವಸ್ತುಗಳನ್ನು ಗುರುತಿಸುತ್ತಾರೆ. ಸಾಕ್ಷಿಗೆ ನಿಪಿ 5 ನ್ನು ತೋರಿಸಿ ತಮ್ಮ ಸಹಿಯನ್ನು ಗುರುತಿಸಿದು ಅದನ್ನು ನಿಪಿ 5(ಸಿ) ಎಂದು ಗುರುತಿಸಿರುತ್ತಾರೆ.

7. ದಿಃ 26-08-2014 ರಂದು ಬೆಳಿಗ್ಗೆ 9-45 ಗಂಟೆಗೆ ನನ್ನನ್ನು ಆರೋಪಿತನ ಕಛೇರಿಯ ಆತ ಕೂರುವ ಕೊಠಡಿ ಪರೀಶಿಲನೆಗೆ ಹೋಗಿದ್ದು ಆಗ ಶಂಕರಪ್ಪ ದ್ವಿ.ದ.ಸ ಇದ್ದು ಶೋಧನಾ ವಾರೆಂಟ್ ತೋರಿಸಿ ಸಹಿ ಪಡೆದು ಪರೀಶಿಲಿಸಿದಾಗ ಕಛೇರಿಯಲ್ಲಿ ಯಾವುದೇ ಆರೋಪಿಗೆ ಸಂಬಂಧಿಸಿದ ವಸ್ತುಗಳು ಸಿಗಲಿಲ್ಲ. ಅದನ್ನು ಬೆಳಿಗ್ಗೆ 10-00 ರಿಂದ 10-45 ರ ವರೆರೆ ಮಾಡಿರುತ್ತೇವೆ. ಸಾಕ್ಷಿಗೆ ಕಡತದಲ್ಲಿನ ನಿಪಿ 7 ಆಪಾದಿತನ ಕಛೇರಿಯ ಕೋಣೆಯ ಪಂಚನಾಮೆ ತೋರಿಸಲಾಗಿ ಅದರಲ್ಲಿರುವ ಸಹಿ ನೋಡಿ ಗುರುತಿಸಿದ್ದು ಅದನ್ನು ನಿ.ಪಿ. 7 (ಬಿ) ಎಂದು ಗುರುತಿಸಲಾಯಿತು. ನಿಪಿ 6 ಮತ್ತು 7 ಇವುಗಳನ್ನು ನನಗೆ ಓದಿ ಹೇಳಿ ಸಹಿ ಪಡೆದಿರುತ್ತಾರೆ. ಈ ಬಗ್ಗೆ ನಾನು ಪೋಲಿಸರ ಮುಂದೆ ಹೇಳಿಕೆ ನೀಡಿರುತ್ತೇನೆ.

<u>ಪಾಟೀ ಸವಾಲು ಆರೋಪಿತರ ಪರವಾಗಿ ಶ್ರೀ. ಎ.ಎ.ಯು. ವಕೀಲರಿಂದ</u>

7. ಪಂಚನಾಮೆಯಲ್ಲಿ ನಮೂದಿಸಿದ ವಸ್ತುಗಳ ಮೌಲ್ಯ ಅಂದಾಜುನದ್ದು ಇರುತ್ತದೆ ಎಂದರೆ ಸರಿ. ಚಿನ್ನ ಮತ್ತು ಬೆಳ್ಳಿ ವಸ್ತುಗಳ ಮೌಲ್ಯ ದಾಳಿ ಮಾಡಿದ ದಿನದ ಮಾರುಕಟ್ಟೆ ಮೌಲ್ಯ ಅಧರಿಸಿದೆ ಎಂದರೆ ಸರಿ.

<u>ಮರು ವಿಚಾರಣೆಃ-ಇಲ್ಲ</u>

(ನನ್ನ ಉಕ್ತ ಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ)

ಓ.ಹೇ.ಕೆ.ಸ. ಇದೆ.

ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಯಾದಗಿರಿ.